ಮಾಡಿದ್ದೇವೆ. ಕೆಲವು ಕಡೆ ತಪ್ಪಿಸಿಕೊಳ್ಳುವಂತ ಕಳ್ಳರೂ ಇದ್ದಾರೆ. ಮಾನ್ಯ ಅಧ್ಯಕ್ಷರೇ ನಾಳೆ ಬೆಳಿಗ್ಗೆ ೧೦ ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ನನ್ನ ಕೊಠಡಿಯಲ್ಲಿ ಪ್ರತಿಪಕ್ಷದ ನಾಯಕರು ಗಳನ್ನು ಆಷ್ಟೇ ಅಲ್ಲದೆ ಆಸಕ್ತಿ ಇರತಕ್ಕ ಎಲ್ಲ ಸದಸ್ಯರುಗಳನ್ನು ಕರೆಸಿಕೊಂಡು ಕೂಡಲೇ ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕೆಂದು ತೀರ್ಮಾನ ಮಾಡಿದ್ದೇನೆ. ತಾವುಗಳೆಲ್ಲರೂ ಬಂದು ವಿಚಾರವಿನಿಮಯಂ ಮಾಡಿ ಒಂದು ಅಂತಿಮ ತೀರ್ಮಾನ ತೆಗೆದುಕೊಳ್ಳೋಣ. ಇದಕ್ಕೆ ತಾವುಗಳೆಲ್ಲರೂ ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—೫ ರೂಪಾಯಿ ಸ್ಟಾಂಪ್ ಡ್ಯೂಟಿ ಏನು ಫಿಕ್ಸ್ ಮಾಡಿದ್ದೀರಿ ; ಅದನ್ನು ಹರಿಜನ ಗಿರಿಜನರಿಗೆ ವಿನಾಯಿತಿ ಮಾಡಿದ್ದೀರಿ. ಈ ವಿನಾಯಿತಿಯನ್ನು ಎಲ್ಲಾ ವರ್ಗದ ಮಕ್ಕಳಿಗೂ ಅನ್ವಯಿಸುವ ವಿಚಾರ ಸರ್ಕಾರಕ್ಕೆ ಇದೆಯೆ ?

ಶ್ರೀ ಎಸ್. ಬಂಗಾರಪ್ಪ.—ನಾಳೆ ಅದನ್ನು ಕೂಡ ಚರ್ಚೆ ಮಾಡೋಣ.

CALLING ATTENTION TO MATTERS OF URGENT PUBLIC IMPORTANCE

re : Clashes between Indian and Iranian students in B.M.S. Engineering College, Bangalore.

SRI P. RAMDEV (Malleswaram).—Sir, I call the attention of the Chief Minister to the incident that took place at B.M.S. College between students of Iranian and other students and the alleged statement by the Iranian envoy.

SRI R. GUNDU RAO (Chief Minister).—Sir, I wish to make the following statement.

On 26th May 1980, the final year examination of 4th semester course of B.M.S. College of Engineering was being held. At about 11-30 A.M. on that day an Iranian student asked an Indian student to allow him to copy. Iranian student on coming out slapped the Indian student. This incident infuriated the Indian students who set fire to the motorcycle belonging to the Iranian. Following this incident on 27th May 1980 about 100 to 150 BMS College students assembled near the College and assaulted two Iranian students. The injured Iranians were treated in Victoria Hospital and later they went away. After this, some 40 to 50 students went to the B.M.S. College Hostel and damaged some of the rooms occupied by the Iranian students and looted their properties in their absence. The Iranian students had left their rooms without locking and it is possible that some of the outside elements might also have participated in the looting of the properties. On the complaint of seven Iranian Students, 7 criminal cases of rioting and theft have been registered in Hanumanthanagar Police Station. Due to these incidents the college was closed from 27th May 1980 onwards. On 28th May 1980 the Students Union of BMS College held a meeting and decided to intensify their agitation demanding the removal of all Iranian Students from the college and

the hostel and for the taking over of the Administration of the College by the Government. On 28th May 1980, one more Iranian student gave a complaint of rioting and theft which also was registered in Hanumanth nagar Police Station. On the same day at the intervention of the police in the premises of the college an appeal was made to the Indian students to return the properties of the Iranians, taken by them on 27th May 1980 and also not to indulge in violence. However, the agitation was continued. In the meanwhile, the Consul of Iran stationed in Hyderabad visited Bangalore and met some of the Iranian students. He issued some press statements criticizing the system of education in India. He also met the Commissioner of Police on 30th May 1980 and talked to him in a rude manner alleging that no protection was given to the Iranians by local police etc.,

He also met the Home Secretary on 31st May 1980 and was told by him that Law and Order would be maintained and that the Iranian and Indian students both were equally entitled to the protection of Law.

On 4th June 1980 the Commissioner of Police held discussionn with the Indian students including the members of the College Union. On 5th June 1980 he held discussions with the leaders of the Irania students. On 6th June 1980 discussions were held with the leaders of the Iranian students and the Indian students and the Principal of the College, in the Office of the Commissioner of Police. In the meeting both the groups agreed to make efforts for the return of the Iranian properties looted on the incident on 27th May 1980. It was also agreed that the Iranian students would publicly express that they did not agree with the reported views of the Consul of Iran which were critical of the system of education in India. It was also agreed that students of both the groups will not resort to any violence and they would attend to their classes peacefully. During this meeting the Principal agreed to open the college with effect from 9th June 1980 on assurance from all the students that they will attend the classes regularly without creating any trouble.

The Press statement of Iranian Consul General will be brought to the notice of Government of India.

ಶ್ರೀ ಪಿ. ರಾಂದೇವ್ ——ಸ್ವಾಮಿ, ಇದಂತೂ ಬಹಳ ದುರದೃಷ್ಟಕರವಾದ ವಿಚಾರ. ಇದರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ವಿಚಾರವನ್ನು ಮರೆತಿದ್ದಾರೆಂದು ಕಾಣುತ್ತದೆ. ಮೇ ೨೮ನೇ ತಾರೀಖಿನ ಪತ್ರಿಕೆಯಲ್ಲಿ ಏನು ವರದಿಯಾಗಿದೆ ಅಂದರೆ, ಇಷ್ಟೆಲ್ಲಾ ನಡೆಯುತ್ತಿದ್ದಾಗಲೂ ಹಲವು ಅಧಿಕಾರಿಗಳೂ ಸೇರಿದಂತೆ ಒಂದೆರಡು ಪೋಲೀಸ್ ತುಕಡಿಗಳು ಅಲ್ಲಿದ್ದವು. ಒಳಹೋಗಲಾಗದ ಪೋಲೀಸರು ಕೈಕಟ್ಟಿ ನಿಂತಿದ್ದರೂ ಒಳಕ್ಕೆ ಪ್ರವೇಶಿಸಲು ಕಾಲೇಜಿನ ಪ್ರಿನ್ಸಿಪಾಲರೂ ಅನುಮತಿ ನೀಡಿರಲಿಲ್ಲ. ಹಾಸ್ಟೆಲ್‌ನ ವಾರ್ಡನ್‌ರ ಅಂಗೀಕಾರ ಸಿಗಲಿಲ್ಲ. (ವಿಶ್ವೇಶ್ವರಪುರದ ಕಾಲೇಜಿನ ಒಳಗೆ ಪ್ರವೇಶಿ

ಸಿದ್ದ ಪೋಲೀಸರಿಗೆ ಅದಕ್ಕೆ ದೊರೆತ ಪ್ರತಿಕ್ರಿಯೆಯ ನೆನಪು ಕಾದಿರಬೇಕು. ಎಲ್ಲ ಮುಗಿದ ನಂತರವೇ ಪೋಲೀಸರಿಗೆ ಹಾಸ್ಟೆಲ್ ಪ್ರವೇಶಕ್ಕೆ ಅನುಮತಿ ಸಿಕ್ಕಿದ್ದು. ಅವರ ಪಾಲಿಗೆ ಉಳಿದದ್ದು ''ಪಂಚನಾಮೆ'' ಮತ್ತು ದೂರಿನ ದಾಖಲೆ ಕಾರ್ಯ ಮಾತ್ರ. ಇದು ನಮ್ಮ ಪೋಲೀಸರಿಗೆ ಕೀರ್ತಿ ತರತಕ್ಕದ್ದೇ ಹೇಳಬೇಕು. ಒಳಗಡೆ ಹಿಂಸಾಚಾರ ಆಗುತ್ತಿದೆ, ಆದರೂ ಒಂದು ಪರ್‌ಮಿಷನ್ ಕೊಡಲಿಲ್ಲ ಅಂತ ಸುಮ್ಮನೆ ಇದ್ದು ಎಲ್ಲಾ ಮುಗಿದ ಮೇಲೆ ಪಂಚನಾಮೆ ಮಾಡಲಿಕ್ಕೆ ಹೋದರೆ ಅದನ್ನು ಶ್ಲಾಘನೆ ಮಾಡುತ್ತೀರಾ ? ಯಾರೇ ತಪ್ಪು ಮಾಡಿರಲಿ, ಆಲ್ಲಿ ಏನು ರಕ್ಷಣೆಯನ್ನು ಕೊಡಬೇಕೋ ಆ ರಕ್ಷಣೆಯನ್ನು ಕೊಡಬೇಕು, ಅದನ್ನು ಮಾಡಿಲ್ಲ. ನಮ್ಮ ಪೋಲೀಸಿನವರು ವಿಫಲರಾಗಿದ್ದಾರೆ. ಇವೊತ್ತು ಅನೇಕ ಪರದೇಶದ ವಿದ್ಯಾರ್ಥಿಗಳು ನಮ್ಮ ಕರ್ನಾಟಕದಲ್ಲಿ ಇದ್ದಾರೆ. ನಮ್ಮ ಬೆಂಗಳೂರಿನಲ್ಲಿ ಮೂರು ಸಾವಿರ ಜನ ಇದ್ದಾರೆಂದು ತಿಳಿದಿದೆ. ಆದರೆ ಅದರಲ್ಲಿ ಯಾವ ದೇಶದ ವಿದ್ಯಾರ್ಥಿಗಳು ಗಲಭೆ ಮಾಡುತ್ತಿಲ್ಲ, ಇರಾನ್ ದೇಶದ ವಿದ್ಯಾರ್ಥಿಗಳು ಮಾಡುತ್ತಿರುವ ಗಲಭೆಗಳು ಸುಮಾರು ಎರಡು ವರ್ಷಗಳಿಂದಲೂ ಈ ಸದನದಲ್ಲಿ ಬರುತ್ತಿದೆ. ಇದರ ಬಗ್ಗೆ ಹಿಂದಿನ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಬರೆದು ಇರಾನ್ ಸರ್ಕಾರಕ್ಕೆ ತಿಳಿಸಲಿಕ್ಕೆ ಹೇಳುತ್ತೇವೆಂದು ಹೇಳಿದ್ದಾರೆ. ಇವೊತ್ತು ಹಲವಾರು ವಿದ್ಯಾರ್ಥಿಗಳಿಂದ ಬೆಂಗಳೂರು ನಗರದಲ್ಲಿ ಶಾಂತಿ ಕದಡಿದೆ. ಅಶಾಂತಿ ಜಾಸ್ತಿಯಾಗಿದೆ. ಅವರು ಏನು ಹೇಳುತ್ತಾರೆ ಅಂದರೆ ಹಣ ಕೊಟ್ಟರೆ ನಮ್ಮಲ್ಲಿ ಏನು ಬೇಕಾದರೂ ಮಾಡಬಹುದು ಎಂದು ಹೇಳುತ್ತಾರೆ. ಉದಾಹರಣೆಗೆ ಜೂನ್ ಎರಡನೇ ತಾರೀಖಿನಲ್ಲಿ ಇರಾನ್ ಕೌನ್ಸಿಲ್ ಜನರಲ್ ಆಗಿರುವ ಅಜೀಜುಲ್ಲಾ ಔಂದಿಯವರು ಏನು ಹೇಳಿದ್ದಾರೆ ಅಂದರೆ.....

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರುವ ಸ್ಟೇಟ್‌ಮೆಂಟ್ ಮೇಲೆ ತಿಳಿಸಿ.

ಶ್ರೀ ಪಿ. ರಾಂದೇವ್.—ಅಧ್ಯಕ್ಷರೆ, ಅವರು ಏನು ಹೇಳಿದ್ದಾರೆ ಅಂದರೆ, ಭಾರತದ ವಿಶ್ವವಿದ್ಯಾನಿಲಯಗಳು ಪದವಿಗಳನ್ನು ಹಣಕ್ಕೆ ಮಾರಾಟ ಮಾಡುತ್ತಿವೆ ಎಂದು ಟೀಕಿಸಿದ ಅವರು, ಪರೀಕ್ಷೆಗಳಲ್ಲಿ ಕಾಪಿ ಮಾಡುವುದು ನಿರಂತರವಾಗಿ ನಡೆಯುತ್ತಿದೆ ಭಾರತದ ಪದವಿಗಳಿಗೆ ಇರಾನಿನಲ್ಲಿ ಇರುವ ಉನ್ನತ ಗೌರವವು ಕುಸಿದು ಅಲ್ಲಿ ಈ ಪದವಿಗಳಿಗೆ ಮಾನ್ಯತೆ ರದ್ದಾಗುವುದು ದೂರವೇನಿಲ್ಲ'' ಎಂದು ಹೇಳಿದ್ದಾರೆ. ನಮ್ಮ ಆಚಾರ ಅವರಿಗೆ ಬೇಕಾಗಿಲ್ಲ. ಪೋಲೀಸ್ ಸ್ಟೇಷನ್ನಿನಲ್ಲಿ ಬೇಕಾದಷ್ಟು ಕಂಪ್ಲೆಂಟುಗಳು ಇವೆ. ನಮ್ಮ ಹೆಣ್ಣುಮಕ್ಕಳ ಮಾನಭಂಗ ಮಾಡಿದ್ದಾರೆ. ಇಷ್ಟೆಲ್ಲಾ ಆಗುತ್ತಿರುವಾಗ, ಇಷ್ಟೊಂದು ದೂರುಗಳು ಬಂದಾಗ ಸರ್ಕಾರ ಏನು ಮಾಡುತ್ತಿದೆ ಎನ್ನುವುದನ್ನು ತಿಳಿಸಬೇಕು. ಹಿಂದೆ ಅಮೇರಿಕಾದಲ್ಲಿ ನಮ್ಮ ಭಾರತದ ಪ್ರಜೆ ತಪ್ಪು ಮಾಡಿದ್ದಕ್ಕೆ ಅಲ್ಲಿ ಗುಂಡಿಟ್ಟು ಕೊಂದಿದ್ದಾರೆ. ಈ ತರಹ ಇರಾನ್ ದೇಶದಲ್ಲಿ ನಮ್ಮವರು ಏನಾದರೂ ಮಾಡಿದ್ದರೆ, ಅವರು ಸುಮ್ಮನೆ ಬಿಡುತ್ತಿದ್ದರೇನು. ದಯವಿಟ್ಟು ಯಾವ ತರಹ ಕ್ರಮ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೆ, ಇದರಲ್ಲಿ ಎರಡು ವಿಚಾರಗಳು ಇವೆ. ಈಗ ಅಲ್ಲಿನ ಕೌನ್ಸಿಲ್ ಜನರಲ್‌ರವರು ಏನು ಹೇಳಿದ್ದಾರೆ, ಒಂದು ನಮ್ಮ ವಿದ್ಯಾಭ್ಯಾಸದ ಬಗ್ಗೆ, ಮತ್ತೊಂದು ಸರ್ಕಾರ ಒಪ್ಪಿಕೊಂಡ ಹಾಗೆ ಕೌನ್ಸಿಲ್ ಜನರಲ್ ಅವರು ಪೋಲೀಸಿನವರ ಎದುರಿನಲ್ಲಿಯೇ ರ್ಯೂಡ್ ಮ್ಯಾನರ್ ರೀತಿ ಬಿಹೇವ್ ಮಾಡಿದ್ದಾರೆ. ವಿದ್ಯಾಭ್ಯಾಸದ ಕ್ರಮದಲ್ಲಿ ಭ್ರಷ್ಟಾಚಾರ ಇದೆ, ನೀತಿ ನಿಯಮ ಇಲ್ಲ, ಇಲ್ಲಿ ಪದವಿಗಳನ್ನು ಕೊಂಡುಕೊಳ್ಳಬಹುದು ಅಂತ ಹೇಳಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರ ಇರಾನ್ ಸರ್ಕಾರಕ್ಕೆ ತಿಳಿಸುವ ರೀತಿ ಕೇಂದ್ರ ಸರ್ಕಾರಕ್ಕೆ ಎರಡು ಪ್ರಕರಣಗಳಲ್ಲಿ ನೋಟೀಸ್ ಕಳಿಹಿಸಿಕೊಡಲಾಗಿದೆ ಅಂತ ಇದೆ. ಈ ಒಂದು ಕೌನ್ಸಿಲ್ ಜನರಲ್ ಅವರ ಸ್ಟೇಟ್‌ಮೆಂಟ್ ಹಿಂತೆಗೆದುಕೊಳ್ಳಬೇಕು ಅಂತ ಹೇಳಿದಾಗ, ಇರಾನ್ ವಿದ್ಯಾರ್ಥಿಗಳು ನಾವು ವಾಪಸ್ಸು ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡಿದ್ದಾರೆ ಕೌನ್ಸಿಲ್ ಜನರಲ್ ಅವರ ಪರವಾಗಿ ವಿದ್ಯಾರ್ಥಿಗಳು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ ಅದನ್ನು ಗಮನಿಸಬೇಕು, ಯಾರು ಸ್ಟೇಟ್‌ಮೆಂಟ್ ಮಾಡಿದ್ದಾರೋ ಅವರೇ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳು ಅವರ ಪರವಾಗಿ ಹೇಳುವುದಕ್ಕೆ ಆಗುವುದಿಲ್ಲ, ಅದನ್ನು ಇಲ್ಲಿನ ವಿದ್ಯಾರ್ಥಿಗಳು ಒಪ್ಪಿಕೊಳ್ಳುವುದಿಲ್ಲ. ಸಾಮಾನ್ಯವಾಗಿ ಹೋದ ವರ್ಷ ಇದೇ ತರಹ ಪ್ರಕರಣ ಬಂದಿತ್ತು. ಹೋದ ಸಾರಿ ಇರಾನ್ ಹುಡುಗ ಸತ್ತಿದ್ದಾಗ ಅಲ್ಲಿಗೆ ತೆಗೆದುಕೊಂಡು ಹೋಗಿ ಮೆರವಣಿಗೆ ಮಾಡಿ ಯಾವುದೋ ಕಾರಣಕ್ಕೆ ಭಾರತದಲ್ಲಿ ಮರಣ ಹೊಂದಿದ ಅಂತ ತಿಳಿಸಿದ್ದನ್ನು ಮಾನ್ಯ ಸದಸ್ಯರಾದ ಮೈಕೇಲ್ ಫರ್ನಾಂಡೀಸ್ ಅವರು ತಿಳಿಸಿದ್ದಾರೆ. ಆದರ ಬಗ್ಗೆ ಸರ್ಕಾರ ಏನು ವಿಚಾರ ತರಿಸಿದ್ದೀರಾ ? ಈಗ ಅಲ್ಲಿ

ಈ ರೀತಿ ಅಪಪ್ರಚಾರ ಆಗುತ್ತಿದೆ. ಭಾರತದಲ್ಲಿ ಆತ ಬಂದು ಧೈರ್ಯದಿಂದ ನಮ್ಮ ವಿದ್ಯಾಭ್ಯಾಸದ ಕ್ರಮದ ಬಗ್ಗೆ, ನಮ್ಮ ಲಾ ಆಂಡ್ ಆರ್ಡರ್ ಬಗ್ಗೆ' ಪೋಲೀಸಿನವರ ಬಗ್ಗೆ ಟೀಕೆ ಮಾಡಲಿಕ್ಕೆ ಹೊರಟಿರುವಾಗ ನಮ್ಮ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಮಳ್ಳೂರು ಆನಂದರಾವ್.—ಅಧ್ಯಕ್ಷರೆ, ಈಗ ವಿದ್ಯಾಭ್ಯಾಸದ ಬಗ್ಗೆ ಖಂಡನೆ ಮಾಡಿ ಅಪಮಾನಕರವಾದ ಹೇಳಿಕೆಯನ್ನು ಅವರು ಏನು ಕೊಟ್ಟಿದ್ದಾರೆ ಅದನ್ನು ಖಂಡಿಸಿ ಅವರಿಗೆ ನಮ್ಮ ಸರ್ಕಾರ ದೆಹಲಿ ಮೂಲಕ ಪ್ರೊಟೆಸ್ಟ್ ಕಳುಹಿಸಬೇಕು, ಅದನ್ನು ಮಾಡುತ್ತೀರಾ ? ಅವರು ಅಪಮಾನಕರ ಹೇಳಿಕೆಯನ್ನು ಕೊಟ್ಟಿದ್ದಾರೆ. ನಮ್ಮ ಪದವಿಗಳನ್ನು ಮಾರಿಕೊಳ್ಳುತ್ತಿದ್ದೇವೆಯಂತೆ, ನಾವು ಮಾರಾಟ ಮಾಡುವುದಾದರೆ ಅವರು ಕೊಂಡುಕೊಳ್ಳುವುದಕ್ಕೆ ಏತಕ್ಕೆ ಬರಬೇಕಾಗಿತ್ತು. ದಯವಿಟ್ಟು ಅವರಿಗೆ ಪ್ರೊಟೆಸ್ಟ್ ಕಳುಹಿಸಿಕೊಡಬೇಕು. ಇನ್ನು ಎರಡನೆಯದಾಗಿ ಇರಾನ್ ವಿದ್ಯಾರ್ಥಿಗಳ ಉತ್ಕಟತನ ವಿಪರೀತವಾಗಿದೆ. ಮೊದಲು ಅವರು ಓಡಾಡತಕ್ಕ ಮೋಟಾರ್ ಬೈಸಿಕಲ್‌ಗಳನ್ನು ಸೀಜ್ ಮಾಡಿ. ಅವರಿಗೆ ಒಂದು ಸ್ಪೀಡ್ ಲಿಮಿಟ್ಟೇ ಇಲ್ಲ. ಅಲ್ಲದೆ ನಮ್ಮ ಹೆಣ್ಣುಮಕ್ಕಳ ಮೇಲೆ ಸಿಕ್ಕಾಪಟ್ಟೆ ಅತ್ಯಾಚಾರಗಳು ನಡೆಯುತ್ತಿವೆ. ಈಗ ಹಳ್ಳಿಗಳ ಕಡೆಗೆ ಹೋಗಲಿಕ್ಕೆ ಶುರು ಮಾಡಿದ್ದಾರೆ. ಅಲ್ಲಿಯ ಜನರು ಅವರೇ ಕಾನೂನನ್ನು ಕೈಗೆ ತೆಗೆದುಕೊಂಡು ಚರ್ಮ ಸುಲಿದುಬಿಡುತ್ತಾರೆ. ಇವೊತ್ತು ಇರಾನಿ ವಿದ್ಯಾರ್ಥಿಗಳನ್ನು ಕಂಡರೆ ಪೋಲೀಸಿನವರೇ ಭಯ ಬೀಳುತ್ತಾರೆ. ಯಾವ ಪೋಲೀಸಿನವರು ಅವರಿಗೆ ಶಿಕ್ಷೆ ಕೊಡುವುದಿಲ್ಲ. ಇವೊತ್ತು ಐದು ಸಾವಿರ ಜನ ವಿದ್ಯಾರ್ಥಿಗಳು ನಮ್ಮ ಕರ್ನಾಟಕದಲ್ಲಿ ಇದ್ದಾಗ ನಮ್ಮ ಸರ್ಕಾರದ ಜವಾಬ್ದಾರಿ ಇದೆ ಇದನ್ನು ದಯವಿಟ್ಟು ಲಘುವಾಗಿ ಭಾವಿಸಬಾರದು. ವಿದ್ಯಾರ್ಥಿ, ವಿದ್ಯಾರ್ಥಿಗಳಿಗೆ ಏನಾದರೂ ಇದು ಹತ್ತಿಕೊಂಡರೆ ಇದು ಸಾಮಾನ್ಯವಾಗಿ ಇರುವುದಿಲ್ಲ. ಬೇಕಾದರೆ ಅವರು ಇಲ್ಲಿ ಇರುವುದು ಬೇಡ, ಅವರನ್ನೆಲ್ಲಾ ಇರಾನ್‌ಗೆ ಕಳುಹಿಸಿ ನಮ್ಮ ಕರ್ನಾಟಕದಲ್ಲಿ ಇರುವುದು ಬೇಡ. ಕೇಂದ್ರ ಸರ್ಕಾರದವರು ಇರಾನ್ ಸರ್ಕಾರಕ್ಕೆ ತಿಳಿಸಲಿಕ್ಕೆ ಈ ಘಟನೆ ಬಗ್ಗೆ ಒಂದು ಸ್ಟ್ರಾಂಗ್ ಪ್ರೊಟೆಸ್ಟ್ ಕಳುಹಿಸಿಕೊಡಬೇಕು ಅಂತ ಹೇಳುತ್ತೇನೆ.

ಶ್ರೀ ಆರ್. ಗುಂಡೂರಾವ್.—ಅಧ್ಯಕ್ಷರೆ, ನಾನು ವಿವರವಾದಂಥ ಪರದಿಯನ್ನು ಈ ಸದನದ ಮುಂದೆ ಇಟ್ಟಿದ್ದೇನೆ. ಈಗ ಹೊಸದಾಗಿ ಒಂದೆರಡು ಸಲಹೆಗಳನ್ನು ಮಾನ್ಯ ಸದಸ್ಯರಾದ ಚಂದ್ರಶೇಖರಯ್ಯ ಅವರು, ಮಳ್ಳೂರು ಆನಂದ ರಾವ್ ಅವರು ತಿಳಿಸಿದ್ದಾರೆ. ಈಗ ಕೌನ್ಸಿಲ್ ಜನರಲ್ ಅವರ ಬಗ್ಗೆ, ನಾವೇನು ಮಾಡಲಿಕ್ಕೆ ಬರುವುದಿಲ್ಲ. ನಾವು ಏನಿದ್ದರೂ ಕೇಂದ್ರ ಸರ್ಕಾರಕ್ಕೆ ತಿಳಿಸಬಹುದು. ನಾವು ಚರ್ಚೆ ಮಾಡುವುದು ಸೂಕ್ತವಲ್ಲ. ಮಾನ್ಯ ಸದಸ್ಯರಾದ ರಾಂದೇವ್ ಅವರು ಹೇಳಿದ ಹಾಗೆ ಅದನ್ನು ಸಂಮ್ಮನೆ ನೋಡುವುದಿಲ್ಲ ಅದರ ಬಗ್ಗೆ ವಿಚಾರ ಮಾಡುತ್ತೇವೆ ಮಾನ್ಯ ಸದಸ್ಯರು ಪತ್ರಿಕೆಯಲ್ಲಿ ಬಂದಿರತಕ್ಕ ವಿಚಾರವನ್ನು ಗಮನಕ್ಕೆ ತಂದಿದ್ದಾರೆ. ಸರ್ಕಾರದ ಉದ್ದೇಶ ಏನಿತ್ತು, ಆದಷ್ಟು ಬೇಗ ಕಾಲೇಜ್ ರೀ ಓಪನ್ ಮಾಡಿಸಬೇಕು ಅಂತ ಇತ್ತು. ಆ ಕ್ರಮ ಕೈಗೊಂಡಿದ್ದೇನೆ. ಶಾಂತಿಯಿಂದ ನಡೆಯುತ್ತಿದೆ. ಬಾಕಿ ವಿಚಾರ ಏನು ಹೇಳಿದ್ದಾರೆ ಅದರ ಬಗ್ಗೆ ಪೋಲೀಸಿನವರು ಪುಕಾರು ಬಂದಕೂಡಲೇ ಬಿಗಿಯಾದ ಕ್ರಮ ಕೈಗೊಂಡಿದ್ದಾರೆ.

ಶ್ರೀ ಶಿವನಂಜಪ್ಪ.—ಅಧ್ಯಕ್ಷರೆ, ತುಮಕೂರಿನಲ್ಲಿ ಪೋಲೀಸಿನವರನ್ನೇ ಹೊಡೆದಿದ್ದಾರೆ,

ಶ್ರೀ ಆರ್. ಗುಂಡೂರಾವ್.—ಎಲ್ಲಾ ಕಡೆ ಕ್ರಮ ಕೈಗೊಂಡಿದ್ದಾರೆ. ಪೋಲೀಸಿನವರು ಎಲ್ಲಿಯೂ ಸುಮ್ಮನೆ ಬಿಟ್ಟಿಲ್ಲ.

3-00 P. M.

(ii) Scarcity of drinking water in Chittapur Taluk

SRI PRABHAKAR TELKAR.—Sir, I call the attention of the Minister for Rural Development and Panchayat Raj to the situation that has arisen due to the scarcity of drinking water at Watwati, Salhalli, Korwar and other villages in Chittapur Taluk.

†SRI B. RAMAIAH (Minister for Rural Development and Panchayat Raj).—Sir I wish to make the following Statement.